ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೆಳ್ಳುಂಕೆ ಎ.ಎಸ್.

ರಿಟ್ ಅರ್ಜಿಸಂಖ್ಯೆ: 101462/2018 (ಎಸ್-ಕೆಎಟಿ), ದಿನಾಂಕ 11 ನೇ ಡಿಸೆಂಬರ್, 2018.

ಆಜ್ಞೆ

ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್:

ಅರ್ಜಿದಾರರು ಕರ್ನಾಟಕ ರಾಜ್ಯ ನ್ಯಾಯಾಧಿಕರಣ, ಬೆಂಗಳೂರು (ಇನ್ನು ಮುಂದೆ ಸಂಕ್ಷಿಪ್ತವಾಗಿ ' ಕೆಎಟಿ ' ಎಂದು ಉಲ್ಲೇಖಿಸಲಾಗುವುದು)ದಿನಾಂಕ: 11.12.2017 ರಂದು ಅರ್ಜಿಸಂಖ್ಯೆ: 6072/2014 ರಲ್ಲಿ ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

2. ಅರ್ಜಿದಾರರ ಪರ ಮಾನ್ಯ ವಕೀಲರಾದ ಶ್ರೀ ಎಸ್.ಬಿ. ಹೆಬ್ಬಳ್ಳಿ ಮತ್ತು ಪ್ರತ್ಯರ್ಜಿದಾರ ರಾಜ್ಯದ ಪರ ಮಾನ್ಯ ವಿಶೇಷ ವಕೀಲರಾದ ಶ್ರೀ ಸಿ. ಜಗದೀಶ್ ಪಾಟೀಲರ ವಾದಗಳನ್ನು ನಾವು ಆಲಿಸಿದ್ದೇವೆ.

3. ಮೊಕದ್ದಮೆಗೆ ಸಂಬಂಧಿಸಿದ ಸಂಕ್ಷಿಪ್ತ ಸಂಗತಿಗಳೇನೆಂದರೆ, ಅರ್ಜಿದಾರಳುದಿನಾಂಕ: 16.01.1996 ರ ಆದೇಶದನ್ವಯ ದ್ವಿತಿಯ ದರ್ಜೆ ಬೆರಳಚ್ಚುಗಾರಳಾಗಿ ನೇಮಕಗೊಂಡಿದ್ದಳು.ಅರ್ಜಿದಾರಳ ವಾದವೇನೆಂದರೆ ಅವಳು ಪರಿಶಿಷ್ಟ ಪಂಗಡವೆಂದು ಗುರುತಿಸಲಾದ ' ತೊಕರೆ ಕೋಳಿ ' ಜಾತಿಯವಳಾಗಿದ್ದು, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಮೀಸಲಾತಿಗೆ ಸಂಬಂಧಿಸಿದ ಯಾದಿಯಲ್ಲಿ ಆಕೆ ನೇಮಕಗೊಂಡಿದ್ದಳು.ತದನಂತರ ಅರ್ಜಿದಾರಳಿಗೆ ತನ್ನ ಜಾತಿ ಪ್ರಮಾಣಪತ್ರವನ್ನು ಬೆಳಗಾವಿಯ ಜಾತಿ ಪರಿಶೀಲನಾ ಸಮಿತಿಯವರಿಂದ ಪ್ರಮಾಣೀಕರಿಸುವಂತೆ ನಿರ್ದೇಶಿಸಲಾಯಿತು ಮತ್ತು ತದನುಸಾರವಾಗಿ, ಬೆಳಗಾವಿಯ ಜಾತಿ ಪರಿಶೀಲನಾ ಸಮಿತಿ ಹಾಗೂ ಬೆಳಗಾವಿಯ ಜಿಲ್ಲಾಧಿಕಾರಿಯವರ ಸಮ್ಮುಖದಲ್ಲಿ ಸಂಬಂಧಿಸಿದ ವ್ಯವಹರಣೆಗಳನ್ನು ಪ್ರಾರಂಭಿಸಲಾಯಿತು.ಸದರಿ ಸಮಿತಿಯುದಿನಾಂಕ: 29.10.2001 ರ ಆದೇಶದ ಮೂಲಕ ಅರ್ಜಿದಾರಳು ' ತೊಕರೆ ಕೋಳಿ ' ಜಾತಿಗೆ ಸೇರಿದವಳಲ್ಲವೆಂದು ಹಾಗೂ ಆಕೆ ತಲ್ವಾರ್ ಜಾತಿಗೆ ಸೇರಿದವಳೆಂದು ಅಭಿಪ್ರಾಯಪಟ್ಟಿತು ಮತ್ತು ಅಂತಿಮವಾಗಿ, ಆಕೆಗೆ ನೀಡಿದ ಜಾತಿ ಪ್ರಮಾಣಪತ್ರವು ಅಸಿಂಧುವೆಂದು ಅಭಿಪ್ರಾಯಪಟ್ಟಿತು.

ಸದರಿ ಆದೇಶಕ್ಕೆ ವಿರುದ್ಧವಾಗಿ, ಅರ್ಜಿದಾರಳು ಅಪೀಲು ಪ್ರಾಧಿಕಾರದ ಎದುರು ಅಪೀಲು ಹೂಡಿದಳು.ಅಪೀಲು ಪ್ರಾಧಿಕಾರವು ಜಾತಿ ಪರಿಶೀಲನಾ ಸಮಿತಿಯು ನೀಡಿದ ಆದೇಶವನ್ನು ದೃಢಪಡಿಸಿತು.ಸದರಿ ಆದೇಶದ ಆಧಾರದಲ್ಲಿ ತಹಶೀಲ್ದಾರ್ರುವರುದಿನಾಂಕ: 31.05.2008 ರ ಆದೇಶದ ಮೂಲಕ ಅರ್ಜಿದಾರಳ ಜಾತಿ ಪ್ರಮಾಣಪತ್ರವನ್ನು ರದ್ದುಗೊಳಿಸಿದರು.

ಮುಂದುವರೆದು, ಅರ್ಜಿದಾರಳ ವಾದವು, ಆಕೆಯ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಯಿತು ಮತ್ತು ಸದರಿ ಮೊಕದ್ದಮೆಯಲ್ಲಿನ ಎಲ್ಲಾ ಆಪಾದನೆಗಳಿಂದ ಆಕೆಯನ್ನು ದೋಷಮುಕ್ತಗೊಳಿಸಲಾಯಿತು ಎಂಬುದಾಗಿದೆ.ಮುಂದುವರೆದ ಅರ್ಜಿದಾರರ ವಾದದಂತೆ, ಜಾತಿ ಪ್ರಮಾಣಪತ್ರದ ರದ್ದತಿ ನಂತರ

ಪ್ರತ್ಯರ್ಜಿದಾರನ ಸಂಸ್ಥೆಯು ಅರ್ಜಿದಾರಳ ಸೇವೆಯನ್ನು ಕೊನೆಗೊಳಿಸಿದೆ ಮತ್ತು ಅದನ್ನು ಆಕ್ಷೇಪಿಸಿ ಅರ್ಜಿದಾರಳು ಕೆಎಟಿ ಮುಂದೆ ಅರ್ಜಿ ಸಲ್ಲಿಸಿದ್ದಳು. 'ಕೆಎಟಿ ಯು ಊರ್ಜಿತ ಯೋಗ್ಯವಲ್ಲದ ಪ್ರಕರಣವೆಂದು ಅರ್ಜಿಯನ್ನು ವಜಾಗೊಳಿಸಿತು ಹಾಗೂ ಸಕ್ಷಮ ಪ್ರಾಧಿಕಾರದ ಮುಂದೆ ಜಾತಿ ಪ್ರಮಾಣಪತ್ರದ ಪರಿಶೀಲನೆಯ ಆದೇಶವನ್ನು ಪ್ರಶ್ನಿಸುವ ಹಕ್ಕನ್ನು ಆಕೆಗೆ ನೀಡಿತು.ಈ ಘನ ನ್ಯಾಯಾಲಯದ ಎದುರು ಅರ್ಜಿದಾರಳು ಅದನ್ನು ಪ್ರಶ್ನಿಸಿದ್ದಾಳೆ.

4. ಅರ್ಜಿದಾರಳ ಪರ ಮಾನ್ಯ ವಕೀಲರ ವಾದವೇನೆಂದರೆ, ಅರ್ಜಿದಾರಳ ಕುಟುಂಬ ನಾಮವು/ಉಪನಾಮವು ತಲ್ವಾರ್ ಆಗಿದೆ. ಆದರೆ, ಆಕೆ ' ತೊಕರೆ ಕೋಳಿ ' ಸಮುದಾಯಕ್ಕೆ ಸೇರಿದ್ದು, ಭಾರತ ಸರ್ಕಾರದ ಆದೇಶದನ್ವಯ ಇದು ಪರಿಶಿಷ್ಟ ಪಂಗಡವೆಂದು ಪ್ರವರ್ಗೀಕರಿಸಲಾಗಿದೆ ಎಂಬುದಾಗಿದೆ.ಸದರಿ ಪ್ರಾಧಿಕಾರವು, ಸದರಿ ಸಂಗತಿಗಳನ್ನು ಪರಿಗಣಿಸದೆ ಮತ್ತು ಗುಣಾವಗುಣಗಳನ್ನು ವಿವೇಚಿಸದೆ, ಸದರಿ ಜಾತಿಯು ಪರಿಶಿಷ್ಟ ಪಂಗಡಗಳ ಸಮುದಾಯಕ್ಕೆ ಸೇರುವುದಿಲ್ಲವೆಂದು ಮತ್ತು ಅರ್ಜಿದಾರಳು ಸದರಿ ಜಾತಿಗೆ ಸೇರಿದವಳಲ್ಲವೆಂದು ಹೇಳಿದೆ.ಮುಂದುವರೆದು, ಅಪೀಲು ನ್ಯಾಯಾಧಿಕರಣವು ವಿವರವಾಗಿ ವಿಷಯದ ಸುನಾವಣೆಗೆ ಅವಕಾಶ ನೀಡದೆ ಪ್ರಾರಂಭದಲ್ಲಿಯೇ ಅರ್ಜಿಯನ್ನು ವಜಾಗೊಳಿಸಿದೆ ಎಂಬುದಾಗಿ ಅವರು ನಿವೇದಿಸಿದ್ದಾರೆ.ಮುಂದುವರೆದು, ಅರ್ಜಿದಾರಳು ' ತೊಕರೆ ಕೋಳಿ ' ಸಮುದಾಯಕ್ಕೆ ಸೇರಿದವಳೆಂದು ಎಲ್ಲಾ ಶಾಲಾ ದಾಖಲಾತಿಗಳು ಮತ್ತು ಕಾಲೇಜು ದಾಖಲಾತಿಗಳು ಸ್ಪಷ್ಟವಾಗಿ ನಿರೂಪಿಸಿದ್ದರೂ, ' ಕೆಎಟಿ'ಯು ಸದರಿ ಸಂಗತಿಗಳನ್ನು ಸರಿಯಾಗಿ ಪರಿಗಣಿಸದೆ ಹಾಗೂ ಗುಣಾವಗುಣಗಳನ್ನು ವಿವೇಚಿಸದೆ, ವಿಷಯವನ್ನು ವಿಚಾರಣೆ ಮಾಡದೆ ಆಕ್ಷೇಪಿತ ಆದೇಶವನ್ನು ಹೊರಡಿಸಿದೆ ಎಂದು ಅವರು ನಿವೇದಿಸಿದ್ದಾರೆ.ಮುಂದುವರೆದು, ಮಾನ್ಯ ವಕೀಲರು,ದಿನಾಂಕ: 11.3.2002 ರ ಸರ್ಕಾರಿ ಆದೇಶಸಂಖ್ಯೆ: ಎಸ್ಡಬ್ಲ್ಯುಡಿ 713 ಎಸ್ಡಿ 93, ಬೆಂಗಳೂರು ಇದನ್ನು ಉಲ್ಲೇಖಿಸುತ್ತಾ, ಒಂದು ವೇಳೆ ಒಬ್ಬ ವ್ಯಕ್ತಿಯು ಸಕ್ಷಮ ಪ್ರಾಧಿಕಾರವು ನೀಡಿದ ನಕಲಿ ಜಾತಿಪ್ರಮಾಣಪತ್ರದ ಆಧಾರದಲ್ಲಿ ನೇಮಕಾತಿ ಹೊಂದಿದಲ್ಲಿ ಮತ್ತು ಆ ಅಭ್ಯರ್ಥಿಯು ಈಗಾಗಲೇ ದೀರ್ಘಕಾಲದ ಸೇವೆಯಲ್ಲಿದ್ದರೆ, ಅಂಥ ಸನ್ನಿವೇಶಗಳಲ್ಲಿ ಸದರಿ ಆದೇಶದಂತೆ ಅಭ್ಯರ್ಥಿಯ ಸೇವೆಯನ್ನು ಕೊನೆಗೊಳಿಸಲಾಗದು.ಆದರೆ, ಸದರಿ ಪ್ರಮಾಣಪತ್ರದ ಆಧಾರದಲ್ಲಿ ಆತನು ಹೆಚ್ಚಿನ ಅನುಕೂಲಗಳನ್ನು ಪಡೆಯುವುದರಿಂದ ವಂಚಿತನಾಗಬಹುದು ಎಂದು ನಿವೇದಿಸಿದ್ದಾರೆ. 'ಕೆಎಟಿ'ಯು ಸದರಿ ಅಂಶವನ್ನು ಸರಿಯಾಗಿ ಅವಲೋಕಿಸದೆ ಆಕ್ಷೇಪಿತ ಆದೇಶವನ್ನು ಹೊರಡಿಸಿದೆ.ಮುಂದುವರೆದು, ಸದರಿ ಸುತ್ತೋಲೆಯು ಪ್ರಸ್ತುತ ಪ್ರಕರಣಕ್ಕೆ ಹಾಗೂ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ವರದಿಯಾದ ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಇನ್ನೊಬ್ಬರು -ವಿರುದ್ಧ- ಗೋವಿಂದರಾವ್ ಬೊಕಾಡೆರವರ ಮಗನಾದ ವಿಲಾಸ್ ಮತ್ತು ಇನ್ನೊಬ್ಬರು ಪ್ರಕರಣಕ್ಕೂ ಕೂಡ ಅನ್ವಯಿಸುವುದು.ಮಹಾರಾಷ್ಟ್ರ ರಾಜ್ಯ ವಿರುದ್ಧ ಮಿಲಿಂದ್ ಮತ್ತು ಇತರರು ಪ್ರಕರಣದಲ್ಲಿ ಸಂವಿಧಾನ ಪೀಠದ ನಿರ್ಣಯವನ್ನು ಉಲ್ಲೇಖಿಸುತ್ತಾ, ಅದೇ ಪ್ರಯೋಜನವನ್ನು ನೀಡಿದ್ದು, ಸದರಿ ಪ್ರಯೋಜನವನ್ನು ಅರ್ಜಿದಾರಳಿಗೆ ನೀಡಲೇಬೇಕಿರುತ್ತದೆ ಎಂದು ನಿವೇದಿಸಲಾಗಿದೆ. ಮುಂದುವರೆದು, 'ಕೆಎಟಿ'ಯು ಕೂಲಂಕಷವಾಗಿ ಆಲೋಚಿಸದೆ ಅರ್ಜಿಯನ್ನು ವಜಾಗೊಳಿಸಿದೆಯೆಂದು ನಿವೇದಿಸಿದ್ದಾರೆ.ಸೇವೆಯನ್ನು ಕೊನೆಗೊಳಿಸಿರುವುದು ಮುಖ್ಯವಾದ ದಂಡವಾಗಿದೆ.ಅದಲ್ಲದೆ, ಅರ್ಜಿದಾರಳು ಈ ಸಂಸ್ಥೆಯಲ್ಲಿ ಸುಮಾರು 15 ವರ್ಷಗಳಿಗಿಂತ ಹೆಚ್ಚು ಕಾಲ ವಿವಿಧ ಸ್ಥಳಗಳಲ್ಲಿ ಸೇವೆ ಸಲ್ಲಿಸಿದ್ದಾಳೆ.ಈಗ ಪ್ರತ್ಯರ್ಜಿದಾರರು ಚ ಸದರಿ ಮೊಬಲಗನ್ನು ವಸೂಲು ಮಾಡಲು ಹೊರಡಿಸಿರುವ ಆದೇಶವು ಕಾನೂನು ಸಮ್ಮತವಾಗಿಲ್ಲ.ಈ ಹಿನ್ನೆಲೆಯಲ್ಲಿ,

ಅವರು ' ಕೆಎಟಿ ' ಹೊರಡಿಸಿರುವ ಪ್ರಶ್ನಿತ ಆದೇಶವನ್ನು ವಜಾಗೊಳಿಸಿ, ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿದ್ದಾರೆ.

ಅರ್ಜಿದಾರಳ ಪರ ಮಾನ್ಯ ವಕೀಲರು ಶ್ರೀಮತಿ ಶೋಭಾ ಲಕ್ಷ್ಮೀ -ವಿರುದ್ಧ ವಿಭಾಗೀಯ ಆಯುಕ್ತರು, ಬೆಂಗಳೂರು ವಿಭಾಗ ಮತ್ತು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ್ದ ಪಂಜಾಬ್ ನ್ಯಾಷನಲ್ ಬ್ಯಾಂಕ್ ಮತ್ತು ಇನ್ನೊಬ್ಬರು -ವಿರುದ್ಧ-ಗೋವಿಂದರಾವ್ ಬೊಕಾಡೆಯವರ ಮಗನಾದ ವಿಲಾಸ್ ಮತ್ತು ಇನ್ನೊಬ್ಬರು, ಈ ಪ್ರಕರಣಗಳಲ್ಲಿ ಹೊರಡಿಸಿದ ನಿರ್ಣಯಗಳ ಆಧಾರದಲ್ಲಿ ತಮ್ಮ ವಾದವನ್ನು ಸಮರ್ಥಿಸಿಕೊಂಡಿದ್ದಾರೆ.

5. ಇದಕ್ಕೆ ವಿರೋಧವಾಗಿ, ಪ್ರತ್ಯರ್ಜಿದಾರ-ರಾಜ್ಯದ ಪರ ಹಾಜರಾಗಿರುವ ಮಾನ್ಯ ವಕೀಲರು, ಅರ್ಜಿದಾರಳು ಒಂದು ಸುಳ್ಳು ಜಾತಿ ಪ್ರಮಾಣಪತ್ರವನ್ನು ಪಡೆದಿದ್ದು ಮತ್ತು ಅದರಂತೆ, ನೇಮಕಾತಿಯನ್ನು ಪಡೆಯುವಲ್ಲಿ ವಂಚನೆ ನಡೆದಿದೆ ಎಂದು ತಿಳಿದು ಬಂದಿದ್ದು, ಅಂತಹ ಸನ್ನಿವೇಶಗಳಲ್ಲಿ, ಸರ್ಕಾರವುದಿನಾಂಕ: 11.3.2002 ರಲ್ಲಿ ಹೊರಡಿಸಿರುವ ಸುತ್ತೋಲೆಯಲ್ಲಿನ ಪ್ರಯೋಜನಗಳನ್ನು ಅರ್ಜಿದಾರಳಿಗೆ ನೀಡಲಾಗದು.ಸೇವೆಯನ್ನು ಮುಂದುವರೆಸಿದಲ್ಲಿ, ಒಬ್ಬ ಕಳ್ಳನಿಗೆ ಕದ್ದ ಮಾಲನ್ನು ಉಳಿಸಿಕೊಳ್ಳಲು ಅನುಮತಿಸಿದ್ದಕ್ಕೆ ಸಮನಾಗುತ್ತದೆಯೇ ಹೊರತು ಬೇರೆನಲ್ಲ ಎಂಬುದಾಗಿ ಭಾವಾವೇಷದಿಂದ ವಾದಿಸಿದ್ದಾರೆ ಹಾಗೂ ನಿವೇದಿಸಿಕೊಂಡಿದ್ದಾರೆ. ವರದಿಯಾದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ, ಭಾರತೀಯ ಆಹಾರ ನಿಗಮ ಮತ್ತು ಇತರರು -ವಿರುದ್ಧ- ಜಗದೀಶ್ ಬಲರಾಮ್ ಬಹೀರಾ ಮತ್ತು ಇತರರು ಎಐಆರ್ 2017 ಎಸ್ಸಿ 3271, ಪ್ರಕರಣದಲ್ಲಿನ ನಿರ್ಣಯವನ್ನು, ಸದರಿ ಕಾನೂನಿನ ಪ್ರಸ್ತಾವನೆಗೆ ಅವರು ಅವಲಂಬಿಸಿದ್ದಾರೆ.ಮುಂದುವರೆದು ಆತ (ಅರ್ಜಿದಾರಳ ಕಾರ್ಯವು ಸಂವಿಧಾನಕ್ಕೆ ಎಸಗಿದ ವಂಚನೆಯಲ್ಲದೆ ಬೇರೇನಲ್ಲ ಎಂಬುದಾಗಿ ವಾದಿಸಿದ್ದಾರೆ) ಅರ್ಜಿದಾರಳಿಗೆ ತಾನು ಸದರಿ ಜಾತಿ ಮತ್ತು ಪ್ರವರ್ಗಕ್ಕೆ ಸೇರಿದವಳಲ್ಲವೆಂದು ತಿಳಿದಿದ್ದರೂ ಸಹ, ಸುಳ್ಳು ಪ್ರಮಾಣಪತ್ರವನ್ನು ನೀಡುವುದರೊಂದಿಗೆ ಸದರಿ ಪ್ರವರ್ಗದಲ್ಲಿ ನೇಮಕಾತಿಯನ್ನು ಪಡೆದಿರುವಳು ಎಂಬುದಾಗಿ ವಾದಿಸಿದ್ದಾರೆ.ಮುಂದುವರೆದು ಆತನು, ` ತೊಕರೆ ಕೋಳಿ ' ಸಮುದಾಯವು ಪರಿಶಿಷ್ಟ ಪಂಗಡಕ್ಕೆ ಸೇರಿದೆ ಮತ್ತು ಅರ್ಜಿದಾರಳು ಈ ಸಮುದಾಯಕ್ಕೆ ಸೇರಿಲ್ಲವೆಂಬುದು ಪರಿಶೀಲನಾ ಸಮಿತಿಗೆ ತಿಳಿದುಬಂದಿದೆ.ಆದ್ದರಿಂದ ಅರ್ಜಿದಾರಳ ನೇಮಕಾತಿಯನ್ನು ತೆಗೆದುಹಾಕಲಾಗಿದೆ ಮತ್ತು ಕಾನೂನಿನ ದೃಷ್ಟಿಯಲ್ಲಿ ಅರ್ಜಿದಾರಳ ನೇಮಕಾತಿಯು ನ್ಯಾಯಸಮ್ಮತವಾಗಿಲ್ಲ.ಹಾಗಾಗಿ, ಆಕೆಯು ವಂಚನೆಯಿಂದ ಮೀಸಲಾತಿ ಅಭ್ಯರ್ಥಿಗೆ ಸೇರಬೇಕಾದ ಹುದ್ದೆಯನ್ನು ಅಲಂಕರಿಸಿದ್ದು, ಆ ಹುದ್ದೆಗಾಗಿ ತನ್ನ ಹಕ್ಕನ್ನು ಕ್ಲೇಮು ಮಾಡಲಾಗದು ಎಂದು ವಾದಿಸಿದ್ದಾರೆ.ಮುಂದುವರೆದು, ನೇಮಕಾತಿಯು ಪ್ರಾರಂಭದಿಂದಲೇ ಶೂನ್ಯವಾಗಿತ್ತು ಎಂದು ಅವರು ನಿವೇದಿಸಿಕೊಂಡಿದ್ದಾರೆ.ತನ್ನ ವಾದವನ್ನು ಪುಷ್ಟೀಕರಿಸಲು ಈ ನ್ಯಾಯಾಲಯದ ಶ್ರೀ ಜೆ. ಮಾದೇಗೌಡ ಬಿನ್ ಲೇಟ್ ಜವರೇಗೌಡ -ವಿರುದ್ಧ ಹೆಚ್ಚುವರಿ ನಿರ್ದೇಶಕರು, ಸಿಆರ್ಇ ಸೆಲ್ ರಿಟ್ ಅಪೀಲುಸಂಖ್ಯೆ: 16698/2011,ದಿನಾಂಕ: 29.11.2012 314 ಪ್ರಕರಣದ ತೀರ್ಮಾನವನ್ನು ಅವರು ಅವಲಂಬಿಸಿದ್ದಾರೆ.ಮುಂದುವರೆದು ಅವರ ವಾದವು, ಅರ್ಜಿದಾರಳು ' ತೊಕರೆ ಕೋಳಿ ' ಸಮುದಾಯಕ್ಕೆ ಸೇರಿದವಳಲ್ಲವೆಂದು ಜಾತಿ ಪರಿಶೀಲನಾ ಸಮಿತಿಯು ನಿರ್ಣಯಿಸಿದ್ದು, ತದನಂತರ ತಹಶೀಲ್ದಾರ್ರವರು ಜಾತಿ ಪ್ರಮಾಣಪತ್ರವನ್ನು ರದ್ದುಗೊಳಿಸಿದ್ದಾರೆ ಮತ್ತು ಸದರಿ ಆದೇಶವನ್ನು ಆಕೆ ಪ್ರಶ್ನಿಸಿಲ್ಲವಾದ್ದರಿಂದ ಸದರಿ ಆದೇಶವು ಅಂತಿಮಗೊಂಡಿದೆ.ಇಂತಹ ಸನ್ನಿವೇಶಗಳಲ್ಲಿ, ಅರ್ಜಿದಾರಳು ' ಕೆಎಟಿ'ಯ ಆದೇಶವನ್ನು ಪ್ರಶ್ನಿಸುವ ರಿಟ್ ಅರ್ಜಿಯನ್ನು ದಾಖಲಿಸಲಾಗದು.

6. ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳ (ಮೀಸಲಾತಿ ಮತ್ತು ನೇಮಕಾತಿ, ಇತರೆ) ನಿಯಮಗಳು, 1992, (ಇನ್ನು ಮುಂದೆ 1992 ರ ನಿಯಮಗಳು ' ಎಂದು ಉಲ್ಲೇಖಿಸಲಾಗುವುದು) ಇದರ 7-ಬಿ ನಿಯಮವನ್ನು ಅವಲಂಬಿಸಿ, ಅವರು ನಿವೇದಿಸಿರುವುದೇನೆಂದರೆ, ಒಂದು ವೇಳೆ ಅಭ್ಯರ್ಥಿ ಸುಳ್ಳು ಪ್ರಮಾಣಪತ್ರವನ್ನು ಹಾಜರುಪಡಿಸಿ, ಅದರಂತೆ ನೇಮಕಾತಿಯನ್ನು ಪಡೆದಿದ್ದಲ್ಲಿ, ಅದರನ್ವಯ ಪಡೆದಿರುವ ಆರ್ಥಿಕ ಪ್ರಯೋಜನಗಳನ್ನು ವಸೂಲಿ ಮಾಡಬಹುದು ಎಂಬುದಾಗಿದೆ.ಮುಂದುವರೆದು, ಅವರು ಸಿಂಧುತ್ವ ಪ್ರಮಾಣಪತ್ರವನ್ನು ಪರೀಕ್ಷಿಸಲು ಮತ್ತು ಸಿಂಧುತ್ವ ಪ್ರಮಾಣಪತ್ರವನ್ನು ಪಡೆಯಲು ಸದರಿ ನಿಯಮಗಳ 7- ಎ ನಿಯಮವು ಅಧಿಕಾರವನ್ನು ನೀಡುವುದು ಎಂದು ವಾದಿಸಿದ್ದಾರೆ.ಈ ಹಿನ್ನೆಲೆಯಲ್ಲಿ, ಆತ ಅರ್ಜಿಯನ್ನು ವಜಾಗೊಳಿಸಬೇಕಾಗಿ ವಿನಂತಿಸಿದ್ದಾರೆ.

7. ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರುಗಳ ವಾದದಲ್ಲಿನ ಗಮನಾರ್ಹ ಅಂಶಗಳನ್ನು ನಾವು ಅವಲೋಕಿಸಿದ್ದೇವೆ ಮತ್ತು ದಾಖಲೆಗಳನ್ನು ಪರಿಶೀಲಿಸಿದ್ದೇವೆ.

8. ವಿವಾದದಲ್ಲಿನ ಅಂಶಗಳನ್ನು ಪರಿಗಣಿಸುವುದಕ್ಕೆ ಮುಂಚೆ ಅಲ್ಲಿನ ಕೆಲವು ಅಂಗೀಕೃತ ಸಂಗತಿಗಳನ್ನು ಪರಿಗಣಿಸಬೇಕಾಗಿದೆ.ಅರ್ಜಿದಾರಳುದಿನಾಂಕ: 16.01.1996 ರಲ್ಲಿ ಪರಿಶಿಷ್ಟ ಪಂಗಡದ ಪ್ರವರ್ಗದಲ್ಲಿ ಗುರುತಿಸಿರುವ ' ತೊಕರೆ ಕೋಳಿ ' ಜಾತಿಯ ಅಡಿಯಲ್ಲಿ ಅಕೆ ದ್ವಿತೀಯ ದರ್ಜೆ ಬೆರಳಚ್ಚುಗಾರಳಾಗಿ ನೇಮಕಾತಿ ಹೊಂದಿರುವುದು ಇಲ್ಲಿ ವಿವಾದಿತ ಅಂಶವಾಗಿಲ್ಲ.ಸದರಿ ಜಾತಿ ಪ್ರಮಾಣಪತ್ರದ ಆಧಾರದಲ್ಲಿ ಆಕೆಯು ಪರಿಶಿಷ್ಟ ಪಂಗಡದ ಅಡಿಯಲ್ಲಿ ಮೀಸಲಾತಿ ಕೋಟಾದ ಸದರಿ ಹುದ್ದೆಗೆ ನೇಮಕಾತಿ ಹೊಂದಿರುವುದನ್ನು ಸಹ ವಿವಾದಿಸಲಾಗಿಲ್ಲ ಜಾತಿ ಪರಿಶೀಲನಾ ಸಮಿತಿಯು ಅದನ್ನು ಪರಿಶೀಲಿಸಿ, ಅರ್ಜಿದಾರಳು ' ತೊಕರೆ ಕೋಳಿ ' ಜಾತಿಗೆ ಸೇರಿದವಳಲ್ಲವೆಂದು ತೀರ್ಮಾನಿಸಿರುವುದು ಮತ್ತು ಸದರಿ ಆದೇಶದ ವಿರುದ್ಧ ಆಕೆಯು ಅಪೀಲು ಪ್ರಾಧಿಕಾರದ ಎದುರು ಅಪೀಲನ್ನು ಸಲ್ಲಿಸಿದ್ದು, ಅಪೀಲು ಪ್ರಾಧಿಕಾರವು ಜಾತಿ ಪರಿಶೀಲನಾ ಸಮಿತಿಯ ಆದೇಶವನ್ನು ಖಾಯಂಗೊಳಿಸಿರುವುದು ಸಹ ವಿವಾದಿತವಾಗಿಲ್ಲ.ತಹಶೀಲ್ದಾರ್‌ರವರು ಅಂಥ ಆದೇಶದ ಆಧಾರದಲ್ಲಿ ಮೊದಲಿನ ಜಾತಿ ಪ್ರಮಾಣಪತ್ರವನ್ನು ರದ್ದುಪಡಿಸಿದ್ದು, ಅರ್ಜಿದಾರಳು ಸದರಿ ಆದೇಶದ ವಿರುದ್ಧವೂ ಕೂಡಾ ಯಾವುದೇ ಅಪೀಲನ್ನು ಸಲ್ಲಿಸಲು ಬಯಸಿಲ್ಲ.

9. ಸುನಾವಣೆಗೆ ಅವಕಾಶವನ್ನು ನೀಡದೆ ಆಕೆಯನ್ನು ಸೇವೆಯಿಂದ ವಜಾಗೊಳಿಸಲಾಗಿದೆ ಮತ್ತು ತಲ್ವಾರ್ ಎಂಬುದು ಕುಟುಂಬದ ಉಪನಾಮವಾಗಿದ್ದು, ಅದು ಯಾವುದೇ ಜಾತಿಗೆ ಸೇರಿಲ್ಲ ಎಂಬುದು ಅರ್ಜಿದಾರರ ಪರ ಮಾನ್ಯ ವಕೀಲರ ವಾದವಾಗಿದ್ದರೂ ಸಹ, ವಿಶೇಷ ಸರ್ಕಾರಿ ನ್ಯಾಯವಾದಿಗಳು ಹಾಜರುಪಡಿಸಿರುವ ದಾಖಲೆಗಳಿಂದ ತಲ್ವಾರ್ ಎಂಬುದು ಸರ್ಕಾರದಿಂದ ಗುರುತಿಸಲಾದ ಮತ್ತು ಅನುಮೋದಿಸಲ್ಪಟ್ಟ ಪಟ್ಟಿಯಲ್ಲಿನ ಒಂದು ಜಾತಿಯಾಗಿದೆ ಎಂದು ಕಂಡುಬಂದಿದೆ.ಅರ್ಜಿದಾರರು ಪರಿಶಿಷ್ಟ ಪಂಗಡವೆಂದು ಗುರುತಿಸಲಾದ ' ತೊಕರೆ ಕೋಳಿ ' ಜಾತಿಗೆ ಸೇರಿದವರೆಂದು ಜಾತಿ ಪ್ರಮಾಣಪತ್ರವನ್ನು ಪಡೆದಿದ್ದಲ್ಲಿ, ಆಕೆಯು ತಾನು ಸದರಿ ಜಾತಿಗೆ ಸೇರಿದವಳೆಂದು ಮತ್ತು ಅದು ಪರಿಶಿಷ್ಟ ಪಂಗಡವೆಂದು ಗುರುತಿಸಲ್ಪಟ್ಟಿದೆಯೆಂದು ಸಾಬೀತುಪಡಿಸಬೇಕು.ಎಲ್ಲಾ ವ್ಯವಹರಣೆಗಳನ್ನು ಜಾತಿ ಪರಿಶೀಲನಾ ಸಮಿತಿ ಹಾಗೂ ತದನಂತರ ಅಪೀಲು ಪ್ರಾಧಿಕಾರದ ಎದುರು ಪರಿಶೀಲನೆಗೆ ಸಲ್ಲಿಸಿದ್ದರೂ ಆ ನಂತರ ಅರ್ಜಿದಾರಳ ಪರವಾಗಿ ನೀಡಿದ ಸದರಿ ಜಾತಿ ಪ್ರಮಾಣ ಪತ್ರವನ್ನು, ರದ್ದು ಮಾಡಲಾಯಿತು, ಒಂದು ವೇಳೆ, ಆಕೆಯು ಸದರಿ ಜಾತಿಗೆ ಸೇರಿದವಳಾಗಿದ್ದರೆ ಯಾವುದೇ ಅಪೀಲನ್ನು ಸಲ್ಲಿಸಬಹುದಿತ್ತು.ಆದರೆ, ಆಕೆಯ ಸಹಮತದಿಂದಲೇ ಯಾವುದೇ ಅಪೀಲು

ಸಲ್ಲಿಕೆಯಾಗಿಲ್ಲವಾದ್ದರಿಂದ ಸದರಿ ವಿವಾದವು ಅಂತಿಮಗೊಂಡಿತು.ಆಕೆಯು ಪರಿಶಿಷ್ಟ ಪಂಗಡವೆಂದು ಗುರುತಿಸಲಾದ ' ತೊಕರೆ ಕೋಳಿ ' ಜಾತಿಗೆ ಸೇರಿದವಳಲ್ಲವೆಂಬ ಸಂಗತಿಯು ಉಳಿದಿದೆ.

10. ಮುಂದುವರೆದು, ಅರ್ಜಿದಾರಳ ಪರ ಮಾನ್ಯ ವಕೀಲರ ವಾದವು, ಒಂದು ವೇಳೆ ಅರ್ಜಿದಾರಳು ಹಾಜರುಪಡಿಸಿರುವ ಜಾತಿ ಪ್ರಮಾಣಪತ್ರದಲ್ಲಿ ವ್ಯತ್ಯಾಸ ಕಂಡುಬಂದಿದ್ದಲ್ಲಿ, ಸರ್ಕಾರಿ ಆದೇಶದ ನಿಬಂಧನೆಗಳಿಗನುಸಾರವಾಗಿ, ಅರ್ಜಿದಾರಳು ಸಾಮಾನ್ಯವರ್ಗಕ್ಕೆ ಸೇರಿದವಳೆಂದು ಪರಿಗಣಿಸಲೇಬೇಕಾಗುತ್ತದೆ ಮತ್ತು ಅರ್ಜಿದಾರಳ ನೇಮಕಾತಿಯನ್ನು ಕೊನೆಗೊಳಿಸಲಾಗದು ಎಂಬುದಾಗಿದೆ.ಮುಂದುವರೆದು ಅವರ ವಾದವು, ಸರ್ಕಾರಿ ಆದೇಶಸಂಖ್ಯೆ: ಎಸ್ಡಬ್ಲ್ಯುಡಿ 713 ಎಸ್ಡಿ 93, ಬೆಂಗಳೂರು,ದಿನಾಂಕ: 11.03.2002 ರ ಅನುಸಾರ ಅಂತಿಮಗೊಂಡ ನೇಮಕಾತಿಯನ್ನು ತೆಗೆದುಹಾಕಲಾಗದು ಆದರೆ, ಸದರಿ ಪ್ರಮಾಣಪತ್ರದ ಆಧಾರದಲ್ಲಿ ಮುಂದಿನ ಪ್ರಯೋಜನಗಳನ್ನು ಪಡೆಯುವುದರಿಂದ ಮಾತ್ರ ವಂಚಿತರಾಗಬಹುದು.ಆದರೆ, ಘನತೆವೆತ್ತ ಸರ್ವೋಚ್ಚ ನ್ಯಾಯಾಲಯವು ವರದಿಯಾದ ಆರ್. ವಿಶ್ವನಾಥ್ ಪಿಳ್ಳೈ ಚ ವಿರುದ್ಧ ಕೇರಳ ರಾಜ್ಯ ಪ್ರಕರಣದಲ್ಲಿ ಈ ಮುಂದಿನಂತೆ ಪರಿವೀಕ್ಷಿಸಿದೆ:

"13. ಈ ವಾದದಲ್ಲಿ ಯಾವುದೇ ಹುರುಳಿಲ್ಲವೆಂದು ನಮಗೆ ಕಂಡುಬಂದಿದೆ.ಅಪೀಲುದಾರನ ವಿರುದ್ಧವಾಗಿ ಆರೋಪಿತ ದುರ್ನಡತೆ ಏನೆಂದರೆ, ಆತನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಹುದ್ದೆಗೆ ಸುಳ್ಳು ಜಾತಿ ಪ್ರಮಾಣಪತ್ರದ ಆಧಾರದಲ್ಲಿ ಸೇವೆಗೆ ಸೇರಿದ್ದಾನೆ.ಅಪೀಲುದಾರನನ್ನು 1977 ರಲ್ಲಿ ಉಪ-ಪೊಲೀಸ್ ಅಧೀಕ್ಷಕರಾಗಿ ನೇಮಕಾತಿ ಮಾಡುವಾಗ ಆತನನ್ನು ಪರಿಶಿಷ್ಟ ಜಾತಿಗೆ ಸೇರಿದವನೆಂದು ಪರಿಗಣಿಸಲಾಗಿತ್ತು.ಇದು ತಪ್ಪು ಎಂದು ಕಂಡುಬಂದಿರುವುದರಿಂದ ಆತನ ನೇಮಕಾತಿಯನ್ನು ರದ್ದುಪಡಿಸಲಾಗಿದೆಯೆಂದು ಪರಿಗಣಿಸುವುದು.ಅಪೀಲುದಾರನು ತಾನು ನಾಗರಿಕ ಸೇವೆಯ ಅವಧಿಯಲ್ಲಿ ತೋರಿದ ದುರ್ನಡತೆಯಿಂದಾಗಿ ಈ ಕ್ರಮವನ್ನು ಜರುಗಿಸಿಲ್ಲ.  ಆದರೆ ಹುದ್ದೆಗೆ ನೇಮಕಾತಿ ಹೊಂದುವ ಮುಂಚೆ ತಿಳಿಸಿರುವಂತೆ ಇಲ್ಲದೆ ಆತನು ಪರಿಶಿಷ್ಟ ಜಾತಿಗೆ ಸೇರಿದವನಲ್ಲವೆಂದು ಕಂಡುಬಂದಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ ಕೈಗೊಳ್ಳಲಾಗಿದೆ..ಆತನು ಹಾಜರುಪಡಿಸಿರುವ ಪ್ರಮಾಣಪತ್ರವು ಅಸಲಿಯೇ ಅಥವಾ ಅಲ್ಲವೆ?ಎಂಬುದನ್ನು ಕೆಐಆರ್ಟಿಎಡಿಎಸ್ ವಿವರವಾಗಿ ಪರಿಶೀಲನೆಗೆ ಒಳಪಡಿಸಿತು ಮತ್ತು ಈ ನ್ಯಾಯಾಲಯದ ಆದೇಶಗಳಡಿ ಪರಿಶೀಲನಾ ಸಮಿತಿಯನ್ನು ರಚಿಸಲಾಯಿತು.ಅಪೀಲುದಾರನಿಗೆ ತನ್ನ ಪ್ರತಿವಾದಕ್ಕೆ ಯುಕ್ತ ಅವಕಾಶವನ್ನು ಒದಗಿಸಲಾಯಿತು.ಉಚ್ಚ ನ್ಯಾಯಾಲಯವು ಹಾಗೂ ತದನಂತರ ಈ ನ್ಯಾಯಾಲಯವು ಪರಿಶೀಲನಾ ಸಮಿತಿಯು ಹೊರಡಿಸಿದ ಆದೇಶವನ್ನು ಎತ್ತಿಹಿಡಿಯಿತು.ಸಂಗತಿಗಳನ್ನು ನಾವು ವಿವರವಾಗಿ ಪರಿಶೀಲಿದಾಗ ಅನುಚ್ಛೇದ 311 ರಲ್ಲಿ ಒದಗಿಸಿರುವ ರಕ್ಷಣೆಯೆಂದರೆ ಒಬ್ಬ ಸರ್ಕಾರಿ ನೌಕರನಿಗೆ, ಆತನನ್ನು ವಿಚಾರಣೆ ಬ ನಡೆಸದೆ ಮತ್ತು ಆ ವಿಚಾರಣೆಯಲ್ಲಿ ತನ್ನ ಪ್ರತಿವಾದಕ್ಕೆ ಯುಕ್ತ ಅವಕಾಶಗಳನ್ನು ನೀಡದೆ; ಆತನನ್ನು ವಜಾಮಾಡತಕ್ಕದ್ದಲ್ಲ, ಸೇವೆಯಿಂದ ತೆಗೆದುಹಾಕತಕ್ಕದ್ದಲ್ಲ ಅಥವಾ ಪ್ರಸ್ತುತ ದರ್ಜೆಯಿಂದ ಇಳಿಸತಕ್ಕದ್ದಲ್ಲ ಎಂಬುದಾಗಿ ನಮಗೆ ಕಂಡುಬಂದಿದೆ.ಇಲಾಖಾ ವಿಚಾರಣೆಯ ಬದಲು ಮೂವರು ಅಧಿಕಾರಿಗಳನ್ನೊಳಗೊಂಡ ಪರಿಶೀಲನಾ ಸಮಿತಿಯಿಂದ ವಿಚಾರಣೆ ನಡೆಸಲಾಗಿದೆ, ಅವರು ಯಾರೆಂದರೆ:(   i) ಹೆಚ್ಚುವರಿ ಅಥವಾ ಜಂಟಿ ಕಾರ್ಯದರ್ಶಿ ಅಥವಾ ಸಂಬಂಧಪಟ್ಟ ಇಲಾಖಾ ನಿರ್ದೇಶಕರು, ಇವರಿಗಿಂತ ಹೆಚ್ಚಿನ ಶ್ರೇಣಿಯಲ್ಲಿರುವ ಯಾರೇ ಅಧಿಕಾರಿ,(ii) ನಿರ್ದೇಶಕರು, ಸಮಾಜ ಕಲ್ಯಾಣ| ಬುಡಕಟ್ಟು, ಕಲ್ಯಾಣ/ಹಿಂದುಳಿದ ವರ್ಗಗಳ ಕಲ್ಯಾಣ, ಸ ಂ

ದರ್ಭಾನುಸಾರವಾಗಿ ಮತ್ತು(iii) ಪರಿಶಿಷ್ಟ ಜಾತಿಗಳ ಸಂದರ್ಭದಲ್ಲಿ, ಸಾಮಾಜಿಕ ಸ್ಥಾನಮಾನಗಳ ಪ್ರಮಾಣಪತ್ರವನ್ನು ಪರಿಶೀಲಿಸುವಲ್ಲಿ ಮತ್ತು ನೀಡುವಲ್ಲಿ ವಿಶೇಷ ಜ್ಞಾನವನ್ನು ಪಡೆದಿರುವ, ಜಾತಿ ಪ್ರಮಾಣಪತ್ರದ ಸಿಂಧುತ್ವದ ಕುರಿತು ಪ್ರಶ್ನೆಯನ್ನು ಪರಿಶೀಲಿಸಲು ಜ್ಞಾನವಿರುವಂಥ ಮತ್ತೋರ್ವ ಅಧಿಕಾರಿ.

ಅಪೀಲುದಾರನಿಗೆ ತನ್ನ ಪ್ರತಿವಾದಕ್ಕೆ ಹಾಗೂ ತನ್ನ ದೃಷ್ಟಿಕೋನವನ್ನು ಮು ಂ ದಿಡಲು ಸಾಕಷ್ಟು ಅವಕಾಶವನ್ನು ನೀಡಲಾಯಿತು.ನ್ಯಾಯಾಲಯದ ನಿರ್ದೇಶನಗಳಡಿಯಲ್ಲಿ ರಚಿಸಲಾದ ಸ್ವತಂತ್ರ ಸಮಿತಿಯಿ ಂ ದ ಅದೇ ದುರ್ನಡತೆಯನ್ನು ಈಗಾಗಲೇ ಪರಿಶೀಲಿಸಲಾಗಿದ್ದು, ಅದರ ನಿರ್ಣಯವನ್ನು ಈಗಾಗಲೇ ನ್ಯಾಯಾಲಯದವರೆಗೆ ಎತ್ತಿ ಹಿಡಿಯಲಾಗಿದ್ದು, ಆ ದುರ್ನಡತೆಯನ್ನು ರುಜುವಾತುಪಡಿಸಲು ನಿಯಮಗಳಡಿ ಹೊಸ ನೋಟೀಸನ್ನು ಹೊರಡಿಸುವುದು ಪುನರಾವರ್ತನಾ ಹಾಗೂ ವ್ಯರ್ಥ ಪ್ರಯತ್ನವಾಗುವುದು.ಅನುಚ್ಛೇದ 311 ರಲ್ಲಿನ ಎರಡನೇ ರಕ್ಷಣಾ ಅಂಶ; ಸೇವೆಯಿಂದ ವಜಾ ಮಾಡುವುದು, ತೆಗೆದುಹಾಕುವುದು ಅಥವಾ ದರ್ಜೆಯಲ್ಲಿ ಇಳಿಸುವ ಆದೇಶವನ್ನು, ಆತನನ್ನು ನೇಮಕಾತಿ ಮಾಡಿಕೊಂಡ ಪ್ರಾಧಿಕಾರಕ್ಕಿ ಂ ತ, ಕೆಳಗಿನ ಪ್ರಾಧಿಕಾರವು ಹೊರಡಿಸತಕ್ಕದ್ದಲ್ಲ ಎಂಬುದನ್ನೂ ಸಹ ಪಾಲಿಸಲಾಗಿದೆ.ಅಪೀಲುದಾರನನ್ನು ಸೇವೆಗಳಿಂದ ಕೊನೆಗೊಳಿಸುವ ಪ್ರಶ್ನಿತ ಆದೇಶವನ್ನು ಆತನನ್ನು ನೇಮಕಾತಿ ಮಾಡಿಕೊಂಡ ಪ್ರಾಧಿಕಾರವೇ ಹೊರಡಿಸಿದೆ.

15. ಇದನ್ನು ಹೊರತುಪಡಿಸಿ, ಅಪೀಲುದಾರನು ತಾನು ಪರಿಶಿಷ್ಟ ಜಾತಿಯ ಸಮುದಾಯಕ್ಕೆ ಸೇರಿದವನು ಎನ್ನುವ ಆಧಾರದ ಮೇಲೆ ನೇಮಕಾತಿಯನ್ನು ಪಡೆದಿರುವನು.ಆತನು ಪರಿಶಿಷ್ಟ ಜಾತಿಯ ಸಮುದಾಯಕ್ಕೆ ಸೇರಿದವನಲ್ಲವೆಂಬುದು ಪರಿಶೀಲನಾ ಸಮಿತಿಗೆ ಕಂಡುಬಂದಾಗ, ಆತನ ನೇಮಕಾತಿಯನ್ನು ಕೊನೆಗೊಳಿಸಲಾಯಿತು.ಕಾನೂನಿನ ದೃಷ್ಟಿಯಲ್ಲಿ ಅವನ ನೇಮಕಾತಿಯನ್ನು ನೇಮಕಾತಿಯೆಂದು ಪರಿಗಣಿಸಲಾಗದು.ಆತನು ಸುಳ್ಳು ಜಾತಿ ಪ್ರಮಾಣಪತ್ರವನ್ನು ಹಾಜರುಪಡಿಸಿ ಮತ್ತು ವಂಚನೆಯಿಂದ ಮೀಸಲಾತಿ ಅಭ್ಯರ್ಥಿಗೆ ಸೇರಿದ ಹುದ್ದೆಯನ್ನು ಅಲಂಕರಿಸಿರುವುದರಿಂದ ಆ ಹುದ್ದೆಯ ಹಕ್ಕನ್ನು ಕ್ಲೇಮು ಮಾಡಲಾಗದು.ಅಪೀಲುದಾರನು ತನ್ನ ನೇಮಕಾತಿ ಆಧಾರದ ಮೇಲೆ ಹುದ್ದೆಗಾಗಿ ಕ್ಲೇಮನ್ನು ಸಲ್ಲಿಸುವ ಹೊರತು ಸಂವಿಧಾನದ ಅನುಚ್ಛೇದ 311 ರಡಿ ನೀಡಿರುವ ಸಂವಿಧಾನಾತ್ಮಕ ಖಾತರಿ ಕೊಡುವಿಕೆಗಾಗಿ ಕ್ಲೇಮನ್ನು ಸಲ್ಲಿಸಲಾಗದು.ಸುಳ್ಳು ಜಾತಿ ಪ್ರಮಾಣಪತ್ರದ ಆಧಾರದ ಮೇಲೆ ಆತನು ನೇಮಕಾತಿಯನ್ನು ಪಡೆದಿರುವುದರಿಂದ, ಆತನನ್ನು ಭಾರತ ಸಂವಿಧಾನದ ಅನುಚ್ಛೇದ 311 ರ ಅರ್ಥವ್ಯಾಪ್ತಿಯಲ್ಲಿ ಹುದ್ದೆಯನ್ನು ಹೊಂದುವ ವ್ಯಕ್ತಿಯೆಂದು ಪರಿಗಣಿಸಲಾಗದು.ಅಪೀಲುದಾರನು ಸುಳ ಪ್ರಮಾಣ ಪತ್ರದ ಆಧಾರದಲ್ಲಿ ನೇಮಕಾತಿಗೊಂಡಿರುವನೆ ಂ ದು ಪರಿಶೀಲನಾ ಸಮಿತಿಯು ದಾಖಲಿಸಿರುವ ನಿರ್ಣಯವು ಅಂತಿಮವಾಗಿದೆ.ಹೀಗಾಗಿ, ಸದ್ಯದ ಪರಿಸ್ಥಿತಿ ಎಂದರೆ, ಅಪೀಲುದಾರನು ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಗೆ ಸಿಗಬೇಕಿದ್ದ ಹುದ್ದೆಯನ್ನು ಕಸಿದುಕೊಂಡಿದ್ದಾನೆ.ಪರಿಶೀಲನಾ ಸಮಿತಿಯು ದಾಖಲಿಸಿದ ನಿರ್ಣಯದ ದೃಷ್ಟಿಯಲ್ಲಿ ಮತ್ತು ಅದನ್ನು ಎತ್ತಿಹಿಡಿದ ಈ ನ್ಯಾಯಾಲಯದ ಮಟ್ಟಿಗೆ ಆತನು ಹುದ್ದೆಯಲ್ಲಿ ಮುಂದುವರೆಯಲು ತನ್ನನ್ನು ತಾನೇ ಅನರ್ಹಗೊಳಿಸಿಕೊಂಡಿದ್ದಾನೆ.ನೇಮಕಾತಿಯು ಪ್ರಾರಂಭದಿಂದಲೇ ಶೂನ್ಯವಾಗಿತ್ತು.ಸದರಿ ಶೂನ್ಯ ನೇಮಕಾತಿಯನ್ನು ಅಪೀಲುದಾರನು ಭಾರತ ಸಂವಿಧಾನದ ಅನುಚ್ಛೇದ 311 ರ ಅರ್ಥದಲ್ಲಿ ನಾಗರಿಕ ಹುದ್ದೆಯನ್ನು ಹೊಂದಿದ್ದನೆಂದು ಕ್ಲೇಮು ಮಾಡಲು ಅವನಿಗೆ ಸಾಧ್ಯಗೊಳಿಸುತ್ತದೆ ಎಂದು ಹೇಳಲಾಗದು.ಅಪೀಲುದಾರನು ವಂಚನೆಯಿ ಂ ದ ನೇಮಕಾತಿಯನ್ನು ಪಡೆದಿರುವುದರಿಂದ, ಆತನು

ವಂಚನೆಯಿಂದ ಸೇವೆಗೆ ಸೇರಿರುವುದರ ಲಾಭವನ್ನು ಪಡೆಯಲು ಅವನಿಗೆ ಅವಕಾಶವನ್ನು ಕೊಡಲಾಗದು ಮತ್ತು ಭಾರತ ಸಂವಿಧಾನದ ಅನುಚ್ಛೇದ 311 ಕ್ಕೆ ಸಂಬಂಧಿಸಿದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳನುಸಾರ ವ್ಯವಹರಿಸಲು ಹಕ್ಕುಳ್ಳ ಹುದ್ದೆಯನ್ನು ಪಡೆದಿದ್ದನೆಂದು ಕ್ಲೇಮು ಮಾಡಲಾಗದು.ಒಂದು ನೇಮಕಾತಿಯನ್ನು ವಂಚನೆ ಅಥವಾ ಮೋಸದಿಂದ ಸೇವೆಗೆ ಗಳಿಸಿದಲ್ಲಿ ಅದನ್ನು ಕಾನೂನಿನ ದೃಷ್ಟಿಯಲ್ಲಿ ನೇಮಕಾತಿಯೆಂದು ಹಾಗೂ ಅವನು, ಸೇವೆಯಲ್ಲಿ ಇರುವನೆಂದು ಪರಿಗಣಿಸಲಾಗದು, ಅ ಂ ತಹ ಸನ್ನಿವೇಶದಲ್ಲಿ ಸಂವಿಧಾನದ ಅನುಚ್ಛೇದ 311 ಅನ್ವಯಿಸುವುದೇ ಇಲ್ಲ. "

11. ಮೇಲೆ ಹೇಳಿದ ಕಂಡಿಕೆಯನ್ನು ಗಮನಿಸಿದಾಗ, ಒಬ್ಬ ವ್ಯಕ್ತಿಯು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವನೆಂಬ ಜಾತಿ ಪ್ರಮಾಣಪತ್ರದ ಆಧಾರದಲ್ಲಿ ನೇಮಕಾತಿಯನ್ನು ಪಡೆದಾಗ ಮತ್ತು ತರುವಾಯ ಜಾತಿ ಪರಿಶೀಲನೆಯ ನಂತರ ಆತನು ಸದರಿ ಸಮುದಾಯಕ್ಕೆ ಸೇರಿದವನಲ್ಲವೆಂದು ಕಂಡುಬಂದರೆ, ಆತನ ನೇಮಕಾತಿಯನ್ನು ತೆಗೆದುಹಾಕುವುದು, ಎಂಬುದು ಸ್ಪಷ್ಟವಾಗಿದೆ.ಆತನ ನೇಮಕಾತಿಗೆ ಕಾನೂನಿನ ದೃಷ್ಟಿಯಲ್ಲಿ ಯಾವುದೇ ಮಾನ್ಯತೆ ಇರುವುದಿಲ್ಲ ಮತ್ತು ಆತನು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಿ, ವಂಚನೆಯಿಂದ ಮೀಸಲಾತಿ ಅಭ್ಯರ್ಥಿಗೆ ಸೇರಬೇಕಾದ ಹುದ್ದೆಯನ್ನು ಕಸಿದುಕೊಂಡಿರುವುದರಿಂದ, ಆ ಹುದ್ದೆಯನ್ನು ಅವನು ಕ್ಲೇಮು ಮಾಡಲಾಗದು.ಅಂಥ ಸುಳ್ಳು ಜಾತಿ ಪ್ರಮಾಣಪತ್ರದ ಆಧಾರದಲ್ಲಿ ಒಬ್ಬ ವ್ಯಕ್ತಿಯು ನೇಮಕಾತಿಯನ್ನು ಪಡೆದಾಗ, ಭಾರತ ಸಂವಿಧಾನದ ಅನುಚ್ಛೇದ 311 ರ ಅರ್ಥವ್ಯಾಪ್ತಿಯಲ್ಲಿ ಸಿವಿಲ್ ಹುದ್ದೆಯನ್ನು ಹೊಂದಿರುವ ವ್ಯಕ್ತಿಯೆಂದು ಪರಿಗಣಿಸಲಾಗದು ಮತ್ತು ಸಂವಿಧಾನದ, ಅನುಚ್ಛೇದ 311 ರಲ್ಲಿನ ರಕ್ಷಣೆಯನ್ನು ಸಹ ಒದಗಿಸಲಾಗದು.ಅರ್ಜಿದಾರರ ಪರ ಮಾನ್ಯ ವಕೀಲರ ವಾದವು,ದಿನಾಂಕ: 11.03.2002 ರ ಸರ್ಕಾರಿ ಆದೇಶದ ಅನುಕೂಲಗಳನ್ನು ನೀಡಬೇಕು ಎಂಬುದಾಗಿದ್ದರೂ, ಸದರಿ ಸಂಗತಿಗಳು ಮತ್ತು ಸನ್ನಿವೇಶಗಳು ಈ ಮೊಕದ್ದಮೆಯಲ್ಲಿನ ಪ್ರಸ್ತುತ ಸಂಗತಿಗಳಿಗೆ ಅನ್ವಯವಾಗುವುದಿಲ್ಲ.

12. ಮೇಲೆ ಉಲ್ಲೇಖಿಸಿದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಎಫ್ಸಿಐ ಮತ್ತು ಇತರರು ಪ್ರಕರಣದ ನಿರ್ಣಯದಲ್ಲೂ ಸಹ, ನೇಮಕಾತಿ ವಿಷಯದಲ್ಲಿ ಅನರ್ಹವಾದ ಅನುಕೂಲಗಳನ್ನು ಹೊಂದುವ ದೃಷ್ಟಿಯಿಂದ ಯಾವುದೇ ವಂಚನೆ ಅಥವಾ ಯಾವುದೇ ಮಿಥ್ಯಾಸೃಷ್ಟಿ ಅಥವಾ ಯಾವುದೇ ತಪ್ಪು ವ್ಯಾಖ್ಯಾನಗಳನ್ನು ಮಾಡಿದ್ದಲ್ಲಿ, ಮಿಅಂದ್ ಪ್ರಕರಣದಲ್ಲಿ ಒದಗಿಸಿದ ರಕ್ಷಣೆಯನ್ನು ನೀಡಲಾಗುವುದಿಲ್ಲ ಎಂಬುದನ್ನು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.ಚ ಪ್ರಮಾಣಪತ್ರವು ಸುಳ್ಳಿನದಾಗಿದೆ.ಮಿಥ್ಯಾಸೃಷ್ಟಿಯಾಗಿದೆ ಅಥವಾ ಮರೆಮಾಚುವ ಮೂಲಕ ಅಥವಾ ಬೇರೆ ರೀತಿಯಲ್ಲಿ ಕುತಂತ್ರವೆಸಗಲಾಗಿದೆ ಎಂಬ ಯಾವುದೇ ಆರೋಪವಿಲ್ಲದ ಪಕ್ಷದಲ್ಲಿ, ಅನುಕೂಲಗಳ ನಿರಾ ಕ ರ ಣೆಂತು ಸಮಥನೀಯವಾಗಬಹುದು.ಮುಂದುವರೆದು, ಸದರಿ ನಿರ್ಣಯದ ಕಂಡಿಕೆ ಸಂಖ್ಯೆ 55 ರಲ್ಲಿ ಸಹ ಇದನ್ನು ಗಮನಿಸಲಾಗಿದ್ದು, ಅದನ್ನು ಈ ಮುಂದಿನಂತೆ ಓದಲಾಗುವುದು:

*55. ನಿಧಿ ಕ್ಯೆಂ ಮತ್ತು ಇನ್ನೊಬ್ಬರು ವಿರುದ್ಧ ಮಧ್ಯಪ್ರದೇಶ ರಾಜ್ಯ ಮತ್ತು ಇತರರು, ಇದರಲ್ಲಿ ಮಧ್ಯಪ್ರದೇಶ ರಾಜ್ಯದಲ್ಲಿ ವೈದ್ಯಕೀಯ ಪ್ರವೇಶಾತಿಗಳಿಗೆ ಸಂಬಂಧಿಸಿದಂತೆ ವ್ಯವಸ್ಥಿತ ವಂಚನೆ ಪ್ರಕರಣದಲ್ಲಿ, ತ್ರಿಸದಸ್ಯ ನ್ಯಾಯಾಧೀಶರ ಪೀಠದ ಸಲುವಾಗಿ ಮಾತನಾಡುವಾಗ, ನಮ್ಮಲ್ಲಿ ಒಬ್ಬರು ಇತ್ತೀಚೆಗೆ ನೀಡಿದ ತೀರ್ಪಿನಲ್ಲಿ ಈ ಅಂಶವನ್ನು ಪರಿಗಣಿಸಲಾಗಿದೆ.ಅದನ್ನು ಈ ಮುಂದಿನಂತೆ ಗಮನಿಸಲಾಗಿದೆ:

"92. ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ ಎಂ.ಬಿ.ಬಿ.ಎಸ್., ಕೋರ್ಸಿಗೆ ಪ್ರವೇಶಾತಿಯನ್ನು ಪಡೆಯಲು ನಿರ್ಧರಿತವಾದ ನಿಯಮಗಳನ್ನು ಉಲ್ಲಂಘಿಸಿ, ಅತಿಜಾಗರೂಕತೆ ಮತ್ತು ವ್ಯವಸ್ಥಿತವಾಗಿ ಹೆಣೆಯಲಾದ ಯೋಜನೆಯಲ್ಲಿ ಪ್ರಜ್ಞಾಪೂರ್ವಕವಾಗಿ ಭಾಗಿಯಾದ ಅಪೀಲುದಾರರಿಗೆ ಹಕ್ಕುಗಳನ್ನು ಅಥವಾ ಅನುಕೂಲಗಳನ್ನು ನೀಡುವುದು ' ಅನ್ಯಾಯ'ದ ಕಾರಣವನ್ನು ಸಮರ್ಥಿಸಿದಂತಾಗುವುದು.ಇದು ಕಳ್ಳನಿಗೆ ಕದ್ದ ಮಾಲನ್ನು ಉಳಿಸಿಕೊಳ್ಳಲು ಅನುಮತಿ ನೀಡಿದಂತೆ ತೋರುವುದು ಮತ್ತು ನ್ಯಾಯಾಲಯವು ಯುಕ್ತ ಮಾರ್ಗವನ್ನು ಸ್ವೀಕರಿಸಿದ ಹಾಗೂ ಅನುಸರಿಸಿದವರ ಕಾರಣವನ್ನು ಬೆಂಬಲಿಸಿಲ್ಲವೆಂಬಂತೆ ಗೋಚರಿಸುವುದು.ಇಂತಹ ಕ್ರಮವು ನ್ಯಾಯ ವಿತರಣಾ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಜನರು ಪ್ರಶ್ನಿಸುವಂತೆ ಮಾಡುತ್ತದೆ.ಅಪೀಲುದಾರರ ಪರವಾಗಿ ಸೂಚಿತವಾಗಿರುವ ರೀತಿಯಲ್ಲಿ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವುದು ಖಂಡಿತವಾಗಿ ಅನ್ಯಾಯವೆಸಗಿದವರಿಗೆ ಅನ್ಯಾಯವೆಸಗುವವರ ಪರವಾಗಿ ನ್ಯಾಯಾಲಯದ ಬೆಂಬಲ ದೊರೆತಂತೆ ಕಾಣುವುದು.ಅದು ಶೈಕ್ಷಣಿಕ ಸಮುದಾಯದ ಸಮಗ್ರತೆಯನ್ನು ಕೂಡಾ ರಾಜಿ ಮಾಡಿಕೊಂಡಂತಾಗುವುದು.ಸಂಪೂರ್ಣ ನ್ಯಾಯವನ್ನು ಒದಗಿಸುವ ನೆಪದಲ್ಲಿ ಎಂ.ಬಿ.ಬಿ.ಎಸ್. ಕೋರ್ಸಿಗೆ ಪ್ರವೇಶಾತಿಯನ್ನು ಪಡೆದಿರುವ ಅಪೀಲುದಾರರ ತಪ್ಪು ದಾರಿಯನ್ನು ಈ ನ್ಯಾಯಾಲಯವು ಯಾವುದೇ ಕಾರಣಕ್ಕೂ ಬೆಂಬಲಿಸುವುದಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದೆ ".

ಮುಂದುವರೆದು ವಿಷಯವನ್ನು ವಿವರಿಸುತ್ತಾ, ಈ ನ್ಯಾಯಾಲಯವು ಒತ್ತಿ ಹೇಳುವುದೇನೆಂದರೆ:0

"99, ಹಿಂದೆ ಹೇಳಿದ ಕಂಡಿಕೆಗಳಲ್ಲಿನ ಪರಿಗಣನೆಗಳನ್ನು ನಾವು ದಾಖಲಿಸಿರುವುದನ್ನು ಹೊರತುಪಡಿಸಿ, ರಾಷ್ಟ್ರೀಯ ನಡತೆ ಎಂಬ ಬಹುಮುಖ್ಯ ಉದ್ದೇಶವನ್ನು ಸಹ ನಾವು ಹೊಂದಿದ್ದೇವೆ ಎನ್ನುವ ಅಭಿಪ್ರಾಯವನ್ನು ಒಪ್ಪಿಕೊಳ್ಳಬಹುದಾಗಿದೆ.

ಸ ೦ ಪ ತನ್ನ ಕಳ್ ದ್ ಕ ೦ ಡಾಗ ಏನ ಕಳೆದುಹೋಗಿರುವುದಿಲ್ಲ ಆರೋಗ್ಯವನ್ನು ಕಳೆದುಕೊಂಡಾಗ ಏನೋ ಒಂದು ಕಳೆದುಹೋಗಿರುತ್ತದೆ.ಆದರೆ, ಚಾರಿತ್ರ್ಯವನ್ನು ಕಳೆದುಕೊಂಡಾಗ ಎಲ್ಲವೂ ಕಳೆದುಹೋಗಿರುತ್ತದೆ.ಎಂಬ ನಾಣ್ನುಡಿಯಿದೆ.

ನಮ್ಮ ಮುಂದಿರುವ ವಿವಾದಾಂಶವು ಬಹಳ ವಿಸ್ಕೃತವಾದ, ಆಯಾಮವನ್ನೊಳಗೊಂಡಿದೆ.ಒಂದು ವೇಳೆ ನಾವು ತಕ್ಷಣದ ಸಾಮಾಜಿಕ ಅಥವಾ ಸಮಾಜಕ್ಕೆ ಸಂಬಂಧಿಸಿದ ಲಾಭಗಳ ಬಗ್ಗೆ ಗಮನಿಸುವುದಾದರೆ, ಪರಿಗಣನೆಗೆ ಒಳಪಡುವ ಆಯಾಮಗಳು ಬೇರೆಯದೇ ಆಗಿರುತ್ತವೆ.ಪ್ರಸ್ತುತಪಡಿಸಿರುವ ವಾದಗಳನ್ನು ಸರಿಯಾದ ದೃಷ್ಟಿಕೋನದಿಂದ ಪರಿಗಣಿಸುವ ಅವಶ್ಯಕತೆಯಿದೆ.ಒ ೦ ದು ವಿವರಣೆಯ ಮೂಲಕ ನಾವು ವಿವಾದಾ ೦ ಶದ ಕೇಂದ್ರಬಿಂದುವನ್ನು ಅರಿಯಬೇಕಾಗಿದೆ.ಒಂದು ವೇಳೆ, ಸ್ವಾತಂತ್ರ್ಯ ಹೋರಾಟಗಾರರು ಸೆರೆಮನೆಗಳಲ್ಲಿ ಕೊಳೆಯದಿದ್ದಲ್ಲಿ...... ಹಾಗೂ ಒಂದು ವೇಳೆ, ಅಮೂಲ್ಯ ಜೀವಗಳನ್ನು ಕಳೆದುಕೊಳ್ಳದಿದ್ದಲ್ಲಿ, ನಾವು ನಮ್ಮ ಸ್ವಾತಂತ್ರ್ಯವನ್ನು ಗೆದ್ದು ಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.ರಾಷ್ಟ್ರೀಯ ಆಸಕ್ತಿಯನ್ನು ಒಳಗೊಂಡಾಗ, ಸಂದರ್ಭಕ್ಕೆ ತಕ್ಕಂತೆ ನಾಗರಿಕ ಸ್ವಾತಂತ್ರ್ಯವೂ ಅಥವಾ ಜೀವವೂ ಸಹ ಸ್ವತಃ ಒಂದು ಕ್ಷುಲ್ಲಕ ತ್ಯಾಗವಾಗಬಹುದು.ಅದೆಲ್ಲವೂ ಇಚ್ಚಿತ ಗುರಿಯ ಮೇಲೆ ಅವಲ ೦ ಬಿತವಾಗಿರುವುದು.ಭಾರತ ಸಂವಿಧಾನದ ಪ್ರಸ್ತಾವನೆಯು ನ್ಯಾಯದ ಒರೆಗಲ್ಲಿನ ಆಧಾರದಲ್ಲಿ ಆಡಳಿತದ ತಳಪಾಯದ ಮೇಲೆ ನಿಂತಿದೆ.ಸಂವಿಧಾನದ ಅನುಚ್ಛೇದ 14 ರ ಮೂಲಕ ನಾಗರಿಕರಿಗೆ ಹಾಗೂ ನಾಗರಿಕರಲ್ಲದವರಿಗೂ ಒಂದೇ ರೀತಿಯಲ್ಲಿ ಮೂಲಭೂತ ಹಕ್ಕಾದ, ಕಾನೂನಿನ ಮುಂದೆ ಸಮಾನತೆ ಹಾಗೂ ಕಾನೂನುಗಳಿಂದ ಸಮಾನ ಸಂರಕ್ಷಣೆಯನ್ನು

ನ್ಯಾಯಯುತವಾಗಿ ನೀಡಿದೆ.ಅಪೀಲುದಾರರುಗಳ ಕಾರ್ಯವು ಒಪ್ಪಿಕೊಳ್ಳಲಾಗದ ನಡವಳಿಕೆಗಳಂತೆ ಕ ೦ ಡುಬ ೦ ದಿದೆ ಹಾಗೂ ಕಾನೂನಿನ ನಿಯಮಗಳ ಸಂಪೂರ್ಣ ಉಲ್ಲಂಘನೆಯಾಗಿದೆ.ಅವರುಗಳ ಕೆಲಸವು ಒಂದು ನ್ಯಾಯಯುತವಾದ ಸಾಮಾಜಿಕ ವ್ಯವಸ್ಥೆಯನ್ನು ಮೋಸದಿಂದ ಆಕ್ರಮಣ ಮಾಡುವಂತಹ ಕಾಯಿದೆಗಳಾಗಿ ರೂಪಿತವಾಗಿವೆ.ನಮ್ಮ ಪರಿಗಣಿತ ದೃಷ್ಟಿಯಲ್ಲಿ, ರಾಷ್ಟ್ರೀಯ ನಡತೆಯನ್ನು ವೈಯಕ್ತಿಕ ಅಥವಾ ಸಾಮಾಜಿಕ ಲಾಭಗಳಿಗಾಗಿ ತ್ಯಜಿಸಲು ಸಾಧ್ಯವಿಲ್ಲ.ಒಂದು ವೇಳೆ, ನಾವು ನೀತಿಶಾಸ್ತ್ರದ ಹಾಗೂ ನಡತೆಯ ಆಧಾರದ ಮೇಲೆ ನಮ್ಮ ದೇಶವನ್ನು ಕಟ್ಟುವ ಆಶಯವನ್ನು ಹೊಂದಿದ್ದಲ್ಲಿ ಹಾಗೂ ಒಂದೆ ವೇಳೆ ನಮ್ಮ ನಿಶ್ಚಿತ ಗುರಿಯು ಎಲ್ಲಿ ಕೇವಲ ಕಾನೂನು ನಿಯಮವು ಭದ್ರವಾಗಿರುವುದೋ ಅಂತಹ ದೇಶವನ್ನು ಕಟ್ಟುವಂತಹದಾಗಿದ್ದಲ್ಲಿ ಅಪೀಲುದಾರರು ಸೂಚಿಸಿರುವ ಸಾಮಾಜಿಕ ಲಾಭಗಳಿಗಾಗಿ ಸಲ್ಲಿಸಿದ ಕ್ಲೇಮನ್ನು ನಾವು ಒಪ್ಪಿಕೊಳ್ಳಲಾಗದು.ಮೇಲೆ ಹೇಳಿದ ಪ್ರತೀಕ್ಷಣೆಗಳ ದೃಷ್ಟಿಯಿಂದ, ನಮಗೆ ಕಾನೂನು ನಿಯಮಗಳ ಪರವಾಗಿ ಅಭಿಪ್ರಾಯವನ್ನು ನೀಡಲು ಯಾವುದೇ ತೊಡಕುಗಳಿಲ್ಲ.ಇಂತಹ ಸ್ಥಾನದಲ್ಲಿ ಇದ್ದು, ಅಪೀಲುದಾರರಿಗೆ ಸಂವಿಧಾನದ 142 ನೇ ಅನುಚ್ಛೇದದಡಿ ಯಾವುದೇ ಅನುಕೂಲಗಳನ್ನು ಒದಗಿಸುವುದಕ್ಕೆ ನಮಗೆ ಸಾಧ್ಯವಿಲ್ಲ.

13. ಮೇಲೆ ಉಲ್ಲೇಖಿಸಿದ ಕಂಡಿಕೆಯನ್ನು ಓದುವಾಗ, ಅದರಲ್ಲಿ ನಿರ್ದಿಷ್ಟವಾಗಿ ಗಮನಿಸಿದಂತೆ, ಒಬ್ಬ ವ್ಯಕ್ತಿಯು ಸುಳ್ಳು ಪ್ರಮಾಣಪತ್ರವನ್ನು ಪಡೆದು ಮತ್ತು ಅದರನ್ವಯ ನೇಮಕಾತಿ ಹೊಂದುವುದು ಒಬ್ಬ ಕಳ್ಳನಿಗೆ ಕದ್ದ ಮಾಲನ್ನು ಇಟ್ಟುಕೊಳ್ಳಲು ಅನುಮತಿಸಿದಂತಾಗುತ್ತದೆ.ಆ ದೃಷ್ಟಿಯಲ್ಲಿ ಸಹ ಅಪೀಲುದಾರಳ ಪರ ಮಾನ್ಯ ವಕೀಲರು ಮಂಡಿಸಿರುವ ವಾದದಲ್ಲಿ ಯಾವುದೇ ಹುರುಳಿಲ್ಲ.ಅರ್ಜಿದಾರಳು ನಕಲಿ ಜಾತಿ ಪ್ರಮಾಣ ಪತ್ರದ ಅನುಕೂಲವನ್ನು ಪಡೆದುಕೊಂಡಾಗ, ಸದರಿ ಅಭ್ಯರ್ಥಿಯು, ಸದರಿ ಪ್ರವರ್ಗಕ್ಕೆ ಮೀಸಲಾದ ಹುದ್ದೆಯನ್ನು ಹೊಂದಲು ಯೋಗ್ಯಳಲ್ಲ.ಅದಲ್ಲದೇ ಜಾತಿ ಪ್ರಮಾಣಪತ್ರದ ರದ್ದತಿಯು ಅಂತಿಮತೆಯನ್ನು ಪಡೆದುಕೊಂಡಿದ್ದರೂ ಸದರಿ ಆದೇಶವನ್ನು ಸಹ ಪ್ರಶ್ನಿಸಲಾಗಿಲ್ಲ.ಹಾಗಾಗಿ ಸದರಿ ಸಂಗತಿ ಹಾಗೂ ಸನ್ನಿವೇಶಗಳಡಿಯಲ್ಲಿ, ಆಕೆಯನ್ನು ಸೇವೆಯಿ ೦ ದ ವಜಾಗೊಳಿಸಬಾರದಿತ್ತು.ಸುತ್ತೋಲೆಯಲ್ಲಿನ ಮತ್ತು ನೇಮಕಾತಿ ಆದೇಶದಲ್ಲಿನ ಪ್ರಯೋಜನವನ್ನು ನೀಡಬಹುದಿತ್ತು ಎಂಬ ಅರ್ಜಿದಾರಳ ವಾದವನ್ನು ಒಪ್ಪಿಕೊಳ್ಳಲಾಗದು.

14. ಅರ್ಜಿದಾರಳ ಪರ ಮಾನ್ಯ ವಕೀಲರ ವಾದವು, ಅನುಕೂಲಗಳನ್ನು ಹಿಂಪಡೆಯಲು ಹೊರಡಿಸಿದ ಆದೇಶವು ಸಮಂಜಸವಾಗಿಲ್ಲ ಮತ್ತು ಅಂತಹ ಆದೇಶಗಳನ್ನು ಹೊರಡಿಸಬಾರದು ಎಂಬುದಾಗಿದೆ.ಇದಕ್ಕೆ ವಿರುದ್ಧವಾಗಿ, ಮಾನ್ಯ ವಿಶೇಷ ಸರ್ಕಾರಿ ನ್ಯಾಯವಾದಿಗಳು ನಿಯಮಾವಳಿಗಳ 7- ಎ ಮತ್ತು 7-ಬಿ ನಿಯಮಗಳನ್ನು ಉಲ್ಲೇಖಿಸುತ್ತಾ, ಸದರಿ ನಿಯಮಗಳನುಸಾರ ನೀಡಲಾದ ಅನುಕೂಲಗಳನ್ನು ಹಿಂಪಡೆಯಬಹುದಾಗಿದೆಯೆಂದು ವಾದಿಸಿದ್ದಾರೆ.ಸಂಕ್ಷಿಪ್ತತೆಯ ಉದ್ದೇಶಕ್ಕಾಗಿ 1992 ರ ನಿಯಮಾವಳಿಗಳ 7- ಎ ಮತ್ತು 7-ಬಿ ನಿಯಮಗಳನ್ನು ನಾವು ಉಲ್ಲೇಖಿಸಿದ್ದೇವೆ.ಅದನ್ನು ಈ ಮುಂದಿನಂತೆ ಓದಲಾಗಿದೆ:

" 7- ಎ ಸುಳ್ಳು ಜಾತಿ ಪ್ರಮಾಣಪತ್ರವನ್ನು ಪಡೆದಿದ್ದಕ್ಕಾಗಿ ಕಾನೂನು ಕ್ರಮ:( 1) ಪ್ರಕರಣಕ್ಕೆ ಸಂಬಂಧಿಸಿದಂತೆ ಜಾತಿ ಪರಿಶೀಲನಾ ಸಮಿತಿ ಅಥವಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯ ಮತ್ತು ವಿಭಾಗೀಯ ಆಯುಕ್ತರು ಸಿಂಧುತ್ವ ಪ್ರಮಾಣಪತ್ರದ ಮಂಜೂರಾತಿಗಾಗಿ ಅರ್ಜಿದಾರನು ನೀಡಿದ ಕ್ಲೇಮನ್ನು ತಿರಸ್ಕರಿಸಿದ ಆದೇಶದ ಪ್ರತಿಯನ್ನು ಅಥವಾ ಪ್ರಕರಣಕ್ಕೆ ಸಂಬಂಧಿಸಿದಂತೆ, ಅಂತಹ ಕ್ಲೇಮನ್ನು ತಿರಸ್ಕರಿಸಿದ ಅಪೀಲಿನಲ್ಲಿನ ಆದೇಶದ ಒಂದು ಪ್ರತಿಯನ್ನು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ ನೀಡತಕ್ಕದ್ದು.

7-ಬಿ ಸುಳ್ಳು ಜಾತಿ ಪ್ರಮಾಣಪತ್ರದ ಆಧಾರದ ಮೇಲೆ ಪಡೆದ ಆರ್ಥಿಕ ಅನುಕೂಲಗಳನ್ನು ಹಿಂಪಡೆಯತಕ್ಕದ್ದು/ಪಡೆಯುವಿಕೆ-ಸುಳ್ಳು ಜಾತಿ ಪ್ರಮಾಣಪತ್ರದ ಆಧಾರದ ಮೇಲೆ ಪಡೆದ ವಿದ್ಯಾರ್ಥಿವೇತನ, ಅನುದಾನ, ಭತ್ಯೆಗಳು ಅಥವಾ ಇತರೆ ಆರ್ಥಿಕ ಅನುಕೂಲಗಳು/ಲಾಭಗಳನ್ನು ಪಡೆದುಕೊಂಡಿದ್ದಲ್ಲಿ, ಸರ್ಕಾರದಿಂದ ಅಥವಾ ಯಾವುದೇ ಇತರ ಏಜೆನ್ಸಿಯಿಂದ, ಯಾರೇ ವ್ಯಕ್ತಿಗೆ ಯಾವುದೇ ಪ್ರಮಾಣದ ನೋವಾದಾಗ, ಅಂತಹ ವ್ಯಕ್ತಿಯಿಂದ ಯಾವುದೇ ಪಕ್ಷಪಾತವಿಲ್ಲದೆ, ಯಾವುದೇ ರೀತಿಯ ಶಿಸ್ತುಕ್ರಮದಿಂದ ಮರುಪಡೆಯುವ ಹೊಣೆಯನ್ನು ಹೊಂದಿರುವುದು. "

15. 1992 ರ ನಿಯಮಗಳಲ್ಲಿನ 7-ಬಿ ನಿಯಮದಲ್ಲಿ ಕಂಡುಬಂದಂತೆ, ಜಾತಿ ಆಧಾರದಲ್ಲಿ ಯಾವುದೇ ವ್ಯಕ್ತಿಗೆ ಸರ್ಕಾರದಿಂದ ಯಾವುದೇ ಮೊಬಲಗು ಸಂದಾಯವಾಗಿದ್ದಲ್ಲಿ ಮತ್ತು ಆ ಪ್ರಮಾಣಪತ್ರವು ಸುಳ್ಳು ಜಾತಿ ಪ್ರಮಾಣಪತ್ರವೆಂದು ಪರಿಗಣಿತವಾದಲ್ಲಿ, ಹೊಣೆಗಾರನಾದ ವ್ಯಕ್ತಿಯಿಂದ ಸದರಿ ಅನುಕೂಲಗಳನ್ನು ಇತರ ಯಾವುದೇ ಕಾರ್ಯಗಳಿಗೆ ಧಕ್ಕೆಯುಂಟಾಗದಂತೆ ಹಿಂಪಡೆಯ ಬಹುದಾಗಿದೆಯೆಂದು ಬಹಳ ಸ್ಪಷ್ಟವಾಗಿ ತಿಳಿಸಿದೆ.

16. ಅದರಂತೆ ಆಗಬಹುದಾದರೂ, ಅರ್ಜಿದಾರಳ ಪರ ಮಾನ್ಯ ವಕೀಲರು ವಾದವನ್ನು ಮಂಡಿಸುವ ಸಮಯದಲ್ಲಿ ನ್ಯಾಯಯುತವಾಗಿ ಪ್ರಯೋಜನಗಳನ್ನು ನೀಡುವಂತೆ ಕೋರಿದ್ದಾರೆ.ಆದರೆ ನ್ಯಾಯವನ್ನು ಕೋರಿ ನ್ಯಾಯಾಲಯಕ್ಕೆ ಬರುವ ವ್ಯಕ್ತಿಯು ಸ್ವಯಂ ಶುದ್ಧ ಹಸ್ತನಾಗಿರಬೇಕು.ಸುಳ್ಳು ಕ್ಲೇಮನ್ನು ಸಲ್ಲಿಸಿ ನ್ಯಾಯಾಲಯಕ್ಕೆ ಬರುವ ವ್ಯಕ್ತಿಯು ನ್ಯಾಯಯುತ ಹಕ್ಕಿನ ಬೇಡಿಕೆಯಿಡಲು ಸಾಧ್ಯವಿಲ್ಲ ಅಥವಾ ಅಂತಹ ವ್ಯಕ್ತಿಯ ಪರವಾಗಿ ನ್ಯಾಯಾಧಿಕಾರ ವ್ಯಾಪ್ತಿಯನ್ನು ಚಲಾಯಿಸಲು ನ್ಯಾಯಾಲಯವು ಸಮರ್ಥನೀಯವಾಗಿರುವುದಿಲ್ಲ .ಆ ಹಿನ್ನೆಲೆಯಲ್ಲಿ, ಅರ್ಜಿದಾರಳಿಗೆ ನ್ಯಾಯ ಒದಗಿಸಲು ಸಾಧ್ಯವಿಲ್ಲ.ಕಾನೂನಿನ ಈ ಪ್ರಸ್ತಾವನೆಯನ್ನು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಕುಮಾರಿ ಮಾಧುರಿ ಪಾಟೀಲ್ -ವಿರುದ್ಧ – ಹೆಚ್ಚುವರಿ ಆಯುಕ್ತರು, ಬುಡಕಟ್ಟು ಅಭಿವೃದ್ಧಿ ಎಐಆರ್ 1995 ರ ಎಸ್ಸಿ 94 ಪ್ರಕರಣದ 16 ನೇ ಕಂಡಿಕೆಯಲ್ಲಿ ಮಂಡಿಸಲಾಗಿದೆ.ಅದನ್ನು ಈ ಕೆಳಗೆ ಉದ್ಧೃತಗೊಳಿಸಲಾಗಿದೆ:

“16. ಕುಮಾರಿ ಸುಚಿತಾರವರು ಸಕ್ಷಮ ಅಧಿಕಾರಿಯ ಎದುರು ಯುಕ್ತವಾಗಿ ಅರ್ಜಿಯನ್ನು ಸಲ್ಲಿಸಿದ್ದು, ಅವರ ಅಧಿಕಾರವ್ಯಾಪ್ತಿಗೆ ಸೇರುವ ಮುಲಂದ್ ಪ್ರದೇಶದಲ್ಲಿ ಆಕೆಯ ತಂದೆಯು ವಾಸಿಸುತ್ತಿದ್ದಾರೆ ಹಾಗೂ ಆ ಅಧಿಕಾರಿಯು ಪ್ರಮಾಣಪತ್ರವನ್ನು ನೀಡಲು ನಿರಾಕರಿಸಿದಾಗ, ಆಕೆಯು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಅಪೀಲನ್ನು ಸಲ್ಲಿಸಿ, ನಿರ್ದೇಶನವನ್ನು ಪಡೆದು, ಅದರಂತೆ ಪ್ರವೇಶಾತಿಯನ್ನು ಹೊಂದಿರುವಳು ಎಂಬುದನ್ನು ನಾವು ಗಮನಿಸಿದ್ದೇವೆ.ಹೆಚ್ಚುವರಿ ಆಯುಕ್ತರ ವಿಳಂಬ ನೀತಿಯನ್ನು ಇಲ್ಲಿ ಪ್ರಶ್ನಿಸಲಾಗಿಲ್ಲ.ಅವರು ಗೌರವಾನ್ವಿತ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ನಿರ್ಣಯಿಸುವ ಬದಲು ತಹಶೀಲ್ದಾರ್‌ರವರಿಗೆ ಪ್ರಮಾಣಪತ್ರವನ್ನು ನೀಡಲು ನಿರ್ದೇಶಿಸಿದರು.ಹೀಗಾಗಿ ಆಕೆಯು ಸುಳ್ಳು ಸಾಮಾಜಿಕ ಸ್ಥಾನಮಾನದ ಪ್ರಮಾಣಪತ್ರವನ್ನು ಪಡೆದುಕೊಂಡಳು ಮತ್ತು ಪ್ರವೇಶಾತಿ ಪಡೆಯಲು ನ್ಯಾಯಾಲಯದ ಆದೇಶಗಳನ್ನು ಬಳಸಿಕೊಂಡಿದ್ದಾಳೆ.ಪ್ರವೇಶಾತಿಯನ್ನು ಪಡೆಯಲು ನ್ಯಾಯಾಂಗ ಪ್ರಕ್ರಿಯೆಯನ್ನು ಬಳಸಿಕೊಳ್ಳಲಾಗಿದೆ.ಆಕೆಯು ತನ್ನ ವ್ಯಾಸಂಗವನ್ನು ಮುಂದುವರೆಸಿದ್ದು, ತದನಂತರದಲ್ಲಿ ಆಕೆಯ ಸ್ಥಾನಮಾನ ಪ್ರಮಾಣಪತ್ರದ ಪರಿಶೀಲನೆ ಇತ್ಯರ್ಥವಾಗದೆ ಉಳಿದುಕೊಂಡಿದೆ.ಕ್ಲೇಮುಗಳ ವಿಲೇವಾರಿಯಲ್ಲಿ ಪರಿಶೀಲನಾ ಸಮಿತಿಯ ಕಡೆಯಿಂದ ವಿಳಂಬವಾಗಿರುವುದರಲ್ಲಿ ಯಾವುದೇ ಅನುಮಾನವಿಲ್ಲ ಮತ್ತು

ವಿಳಂಬಗೊಂಡಿರುವುದಕ್ಕೆ ಕಾರಣಗಳನ್ನು ತಿಳಿಯಲು ಯಾವುದೇ ದಾಖಲೆಗಳು ನಮಗೆ ದೊರಕಿಲ್ಲ.ಆಕೆಯ ಸಾಮಾಜಿಕ ಸ್ಥಾನಮಾನವನ್ನು ಆಕೆಯ ಪೋಷಕರು ಅವಳಿಂದ ಮರೆಮಾಚಿದ್ದಾರೆ ಎಂದು ಹೇಳಬಹುದು.ಆದರೆ ಸಂಗತಿಗಳಿಂದ ಕ ಂ ಡುಬರುವುದೇನೆಂದರೆ, ಒಂದು ಕೋಮಿನ ಮೂಲಕ ಪ್ರವೇಶಾತಿಯನ್ನು ಪಡೆಯಲು ಆಕೆಯ ಪೋಷಕರು ನಡವಳಿಕೆ ಕ್ರಮವನ್ನು ಪಾಲಿಸಿದ್ದು ಅದು ಸುಳ್ಳಾದುದೆಂದು ಕಂಡುಬಂದಿದೆ.ಅನೇಕ ಸಂದರ್ಭಗಳಲ್ಲಿ, ಪೋಷಕರ ದುರ್ನಡತೆ ಮಕ್ಕಳಲ್ಲೂ ಕಾಣಸಿಗುತ್ತದೆ.ಆದಾಗ್ಯೂ, ಆಕೆಯ ವಾದದಲ್ಲಿರುವಂತೆ ಅವಳು ತನ್ನ ವ್ಯಾಸಂಗವನ್ನು ಪೂರ್ಣಗೊಳಿಸಲು ಅಂತಿಮ ವರ್ಷ ಮಾತ್ರ ಉಳಿದುಕೊಂಡಿರುವುದರಿಂದ ಹಾಗೂ ಇಂತಹ ಪರಿಸ್ಥಿತಿಯಲ್ಲಿ, ಆಕೆಯ ವ್ಯಾಸಂಗವನ್ನು ಪೂರ್ಣಗೊಳಿಸುವುದರ ಹೊರತು ಬೇರೆ ಏನನ್ನೂ ಮಾಡಲಾಗದು.ಒಂದು ವೇಳೆ ಆಕೆಯು ನಮ್ಮ ಮುಂದೆ ನಿರೂಪಿಸಿದಂತೆ, ತನ್ನ ವ್ಯಾಸಂಗವನ್ನು ಪೂರ್ಣಗೊಳಿಸಿಕೊಂಡಿದ್ದರೆ, ಆಕೆಯು ಅಂತಿಮ ವರ್ಷದ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿ ನೀಡಬೇಕಾಗಿ ಪ್ರಾಂಶುಪಾಲರಿಗೆ ನಾವು ನಿರ್ದೇಶಿಸುತ್ತೇವೆಯೇ ಹೊರತು, ವಂಚನೆಯಿಂದ ಪಡೆದ ಪರಿಶಿಷ್ಟ ಪಂಗಡದ ಸಾಮಾಜಿಕ ಸ್ಥಾನಮಾನದಿಂದಲ್ಲ ಹಾಗೂ ನ್ಯಾಯಾಲಯದ ಆದೇಶದ ಸಹಾಯದಿಂದ ಆಕೆಯು ಪ್ರವೇಶಾತಿಯನ್ನು ಪಡೆಯುವಂತೆ ಹಾಗೂ ವ್ಯಾಸ ಂ ಗವನ್ನು ಮು ಂ ದುವರೆಸುವಂತೆ ಮಾಡಲಾಗದು.ವಿಲೇವಾರಿಯಲ್ಲಿ ಆದ ವಿಳಂಬವು ಆಕೆಯು ಎಂ.ಬಿ.ಬಿ.ಎಸ್. ವ್ಯಾಸಂಗವನ್ನು ಮುಂದುವರೆಸಲು ಸಹಕಾರಿಯಾಯಿತು.

17. ಮೇಲೆ ಹೇಳಿದ ಸದರಿ ಕಂಡಿಕೆಗಳನ್ನು ಗಮನಿಸುವಾಗ ಯಾವುದೇ ಪ್ರಕರಣವು ವಂಚನೆಯ ಆಧಾರದಲ್ಲಿ ಸಲ್ಲಿಸಿದ್ದರೆ, ಯಾವುದೇ ಸಹಾನುಭೂತಿ ಅಥವಾ ನ್ಯಾಯವು ಅರ್ಜಿದಾರಳನ್ನು ರಕ್ಷಿಸಲು ಸಾಧ್ಯವಿಲ್ಲವೆಂದು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಸ್ಪಷ್ಟವಾಗಿ ತೀರ್ಮಾನಿಸಿದೆ.ಆ ದಿಕ್ಕಿನಿಂದಲೂ ಸಹ ಚ ಅರ್ಜಿದಾರಳ ವಾದವನ್ನು ಅಂಗೀಕರಿಸಲು ಸಾಧ್ಯವಿಲ್ಲ.

18. ಅರ್ಜಿದಾರಳ ಪರ ಮಾನ್ಯ ವಕೀಲರು ಉಲ್ಲೇಖಿಸಿದ ನಿರ್ಣಯವನ್ನು ನಾವು ಬಹಳ ಸೂಕ್ಷ್ಮವಾಗಿ ಗಮನಿಸಿದ್ದೇವೆ.ಮೇಲೆ ಹೇಳಿದ ನಿರ್ಣಯಗಳನ್ನು ಪರಿಗಣಿಸಿದಾಗ ಅದರಲ್ಲಿನ ನಿಯಮಗಳು ಈ ಪ್ರಕರಣದ ಪ್ರಸ್ತುತ ಸಂಗತಿಗಳಿಗೆ ಅನ್ವಯವಾಗುವುದಿಲ್ಲ.

19. ಮುಂದುವರೆದು, ಅರ್ಜಿದಾರಳ ವಾದವು ' ಕೆಎಟಿ ' ಯು ಸರಿಯಾಗಿ ವಿವೇಚನೆ ಮಾಡದೆ, ತರಾತುರಿಯಲ್ಲಿ ಅರ್ಜಿಯನ್ನು ವಜಾಗೊಳಿಸಿದೆ ಎಂಬುದಾಗಿದೆ.ಸದರಿ ಆದೇಶವನ್ನು ಪರಿಶೀಲಿಸಿದಾಗ ತಿಳಿಯಪಡುವುದೇನೆಂದರೆ, ವಿವರವಾದ ಆದೇಶವನ್ನು ಹೊರಡಿಸಿಲ್ಲವಾದರೂ, ಪರಿಸ್ಥಿತಿಯ ಸತ್ಯತೆಯನ್ನು ಪರಿಗಣಿಸಿದ ನಂತರ ಸದರಿ ಆದೇಶವನ್ನು ಹೊರಡಿಸಲಾಯಿತು.ನಾವು ಮೇಲೆ ಚರ್ಚಿಸಿದಂತೆ, ಸದರಿ ವಾದವನ್ನು ಮರುಪರ್ಯಾಲೋಚಿಸಿದ ಮತ್ತು ಪ್ರತ್ಯರ್ಜಿದಾರರ ವಾದಗಳ ಗುಣಾವಗುಣವನ್ನು ವಿವೇಚಿಸಿದ ನಂತರವೂ ಸಹ ಅರ್ಜಿದಾರಳ ಪರ ಮಾನ್ಯ ವಕೀಲರು ಮಂಡಿಸಿದ ವಾದವು ಅಂಗೀಕಾರಾರ್ಹವಾಗಿಲ್ಲ.ಅರ್ಜಿದಾರಳ ಪರ ಮಾನ್ಯ ವಕೀಲರ ಎಲ್ಲಾ ವಾದಗಳನ್ನು ನಾವು ಮರು ಅವಲೋಕಿಸಿದ್ದೇವೆ ಮತ್ತು ನ್ಯಾಯಾಧಿಕರಣದ ಆದೇಶದಲ್ಲಿ ಹಸ್ತಕ್ಷೇಪ ಮಾಡಲಾಗುವ ಹಾಗೆ ಅರ್ಜಿದಾರಳ ಬಳಿ ಯಾವುದೇ ಬಲವಾದ ಕಾರಣಗಳಿಲ್ಲ.ಈ ರಿಟ್ ಅರ್ಜಿಯು ಯಾವುದೇ ಗುಣಾರ್ಹತೆಯನ್ನು ಹೊಂದಿಲ್ಲ.

ಆದಕಾರಣ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.